# ನಂಬಿ ಕೆಟ್ಟವರುಂಟೆ ಕೃಷ್ಣಯ್ಯನ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 113.
2. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 166.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 301.
4. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 are slightly different and are not considered here.

ರಾಗ: ಯಮುನಾ-ಕಲ್ಯಾಣಿ ತಾಳ: ಅಟ

ನಂಬಿ ಕೆಟ್ಟವರುಂಟೆ ಕೃಷ್ಣಯ್ಯನ
ನಂಬಲಾರದೆ ಕೆಟ್ಟರು || ಪ ||

ಅಂಬುಜನಾಭನ ಪಾದವ ನೆನೆದರೆ
ಇಂಬುಕೊಡದೆ ದುಃಖವ ಹರಿಸುವ ಶ್ರೀ ಕೃಷ್ಣ || ಅಪ ||

ಬಲಿಯ ಪಾತಾಳಕಿಳುಹಿ ಭಕ್ತನ ಬಾ-
ಗಿಲವ ಕಾಯುವೆ ನಾನೆಂದ
ಛಲದೊಳು ಅಸುರರ ಶಿರಗಳ ತರಿದು ತಾ-
ನೊಲಿದು ವಿಭೀಷಣಗೆ ಪಟ್ಟಗಟ್ಟಿದ ಈ ಕೃಷ್ಣ || 1 ||

ತರಳ ಪ್ರಹ್ಲಾದಗೊಲಿದು, ಹಿರಣ್ಯಕನ ಉ-
ಗುರಿನಿಂದಲೆ ಸೀಳಿದ
ಕರಿರಾಜಗೊಲಿದು ನೆಗಳು ನುಂಗುತಿರಲಾಗ
ಪರಿಹರಿಸಿದ, ಜಲದೊಳು ಪೊಕ್ಕು, ಶ್ರೀ ಕೃಷ್ಣ || 2 ||

ಪಾಂಡವರಿಗೆ ಒಲಿದು, ಕೌರವರನು
ತುಂಡು ಛಿದ್ರವ ಮಾಡಿದ
ಗಂಡರೈವರ ಮುಂದೆ ದ್ರೌಪದಿ ಕೂಗಲು
ಕಂಡು ಕರುಣದಿ ಕಾಯ್ದ ಪುರಂದರ ವಿಠಲನ || 3 ||

**Classification:** Keerthane
**Ankita:** purandara vittala
**Location:** NA
**Category:** Loka Neeti, Hari Sarvottama.
**Sub-Category:** Krishna, Vishnu, dukha, bali, bagilu, asura, Vibhishana, prahallada, gaja, niru, pandava, kourava, draupadi, pati, karuna, mosale,
**Pravachana:** NA
**Explanation:** NA